ಆ) ಬಂದಿದ್ದಲ್ಲಿ, ಇದನ್ನು ಪುನರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಮತ್ತು ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈ ಯೋಜನೆಯು ವಿದ್ಯುತ್ ವೋಲ್ಟೇಜ್ ಲಭ್ಯವಾಗದ ಕಾರಣ ಸ್ಥಗಿತಗೊಂಡಿದೆ. ಈ ಬಗ್ಗೆ ಮೆಸ್ಕಾಂ ಅಧಿಕಾರಿಗಳನ್ನು ಸಂಪರ್ಕಿಸಲಾಗಿದೆ; ತಲಕಾಡು ಬಳಿ ಸಬ್‌ಸ್ಟೇಷನ್ ಆದ ನಂತರ ಅಗತ್ಯವಿರುವ ವೋಲ್ಟೇಜ್ ಲಭ್ಯವಾಗಲಿದ್ದು ,ಪೋಲ್ಟೇಜ್ ದೊರೆತ ಕೂಡಲೇ ಯೋಜನೆಯನ್ನು ಪುನರಾರಂಭಿಸಾಲಾಗುವುದು.

1075(1395) ಶ್ರೀಮತಿ ಸುನಿತಾ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಂಜಾಪುರ ಏತ ನೀರಾವರಿ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಕಾಮಗಾರಿಯನ್ನು ತ್ವರಿತ ಗೊಳಿಸಲು ಕೈಗೊಂಡ ಕ್ರಮಗಳೇನು?

ಇ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ನಂಜಾಪುರ ಏತ ನೀರಾವರಿ ಕಾಮಗಾರಿಯಲ್ಲಿ ಕೆಲವು ತಾಂತ್ರಿಕ ಅಡಚಣೆ ಹಗೂ ನಿರ್ವಹಿಸುವ ಸಮಯದಲ್ಲಿ ಉಂಟಾದ ಅಡಚಣೆಗಳಿಂದಾಗಿ ಸದರಿ ಕಾಮಗಾರಿ ಪ್ರಗತಿ ಕುಂಠಿತ ಗೊಂಡಿರುತ್ತದೆ.

ಆ) ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಉಂಟಾದ ಅಡಚಣೆಗಳನ್ನು ನಿವಾರಿಸಿ ಶೇ.60 ಭಾಗ ಕಾಮಗಾರಿ ಪೂರ್ಣ ಗೊಳಿಸಲಾಗಿದೆ. ಏರು ಕೊಳವೆ ಮಾರ್ಗವು ಬನ್ನೂರು–ಮಳವಳ್ಳಿ ರಸ್ತೆಯು ಹಾಯ್ದು ಹೋಗುವುದರಿಂದ ಪಟ್ಟಣದ ವ್ಯಾಪ್ತಿಯಲ್ಲಿ ಪದೇ ಪದೇ ದುರಸ್ತಿಯನ್ನು ತಪ್ಪಿಸಲು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ಇವರ ಸಲಹೆ ಪಡೆದು PVC ಪೈಪುಗಳ ಬದಲು ಗಟ್ಟಿಣದ ಪೈಪುಗಳನ್ನು ಅಳವಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಯೋಜನೆಯನ್ನು ಜೂನ್ 2005 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

1076(1396) ಶ್ರೀಮತಿ ಸುನಿತ ವೀರಪ್ಪಗೌಡ .ಕೆ (ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬನ್ನೂರು ಕ್ಷೇತ್ರದ ಹಲವಾರು ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ಎಲ್ಲಾ ಗ್ರಾಮಗಳಿಗೆ ಬಸ್ಸಿನ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?